Akashvani: Bangalore
National Bulletin In Kannada
01.10.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
01.10.2026: 13.10hrs
**********

**ಮುಖ್ಯಾಂಶಗಳು :**

1. ಹಲವು ಪೀಳಿಗೆ, ಸರ್ಕಾರ, ತಂತ್ರಜ್ಞಾನ ಮತ್ತು ಪಠ್ಯಕ್ರಮ ಬದಲಾದರೂ ಕೇಂದ್ರ ಲೋಕಸೇವಾ ಆಯೋಗದ ಮೇಲಿನ ವಿಶ್ವಾಸ ಅಚಲ - ಪ್ರಧಾನಿ ನರೇಂದ್ರ ಮೋದಿ
2. ಸ್ವಚ್ಛತೆ ಒಂದು ದಿನದ ಅಭಿಯಾನವಾಗಬಾರದು, ಪ್ರತಿದಿನದ ಕರ್ತವ್ಯವಾಗಬೇಕು - ಸಚಿವ ಅರ್ಜುನ್‌ರಾಮ್ ಮೇಘ್ವಾಲ್
3. ಇಂದು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ ; ಸಕಾಲದಲ್ಲಿ ರಕ್ತ ಪೂರೈಕೆ ಖಾತ್ರಿಗೆ ಬದ್ಧತೆ ಪುನರುಚ್ಚರಿಸಲು ಸಚಿವ ಜೆ.ಪಿ.ನಡ್ಡಾ ಕರೆ
4. ವಿಮಾನ ಪತನವಾಗುವುದನ್ನು ತಡೆದು ನೂರಾರು ಜನರ ಪ್ರಾಣ ಉಳಿಸಿದ ಭಾರತದ ಪೈಲೆಟ್ ಸ್ಮಿತ್ ಮಚ್ಚರ್ ಕಾರ್ಯಕ್ಕೆ ಗಣ್ಯರ ಶ್ಲಾಘನೆ
5. ಏಷ್ಯನ್ ಕ್ರೀಡಾಕೂಟ ; ಇಂದು ಬೆಳಗ್ಗೆ ಒಂದು ಬೆಳ್ಳಿ, ಎರಡು ಕಂಚಿನೊಂದಿಗೆ ಪದಕ ಬೇಟೆ ಮುಂದುವರಿಸಿದ ಭಾರತೀಯ ಆಟಗಾರರು

************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ದೆಹಲಿಯ ಭಾರತ್ ಮಂಟಪದಲ್ಲಿ ನಡೆದ ಕೇಂದ್ರ ಲೋಕಸೇವಾ ಆಯೋಗ-ಯುಪಿಎಸ್‌ಸಿ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಯುಪಿಎಸ್‌ಸಿ ನೂರು ವರ್ಷಗಳನ್ನು ಪೂರೈಸಿರುವುದು ಒಂದು ವೈಭವವಷ್ಟೇ ಅಲ್ಲ ಇದು ಪ್ರತಿವರ್ಷ ಲಕ್ಷಾಂತರ ಯುವಕರ ಆಶೋತ್ತರಗಳ ಸಂಭ್ರಮವೂ ಆಗಿದೆ. ಜೊತೆಗೆ ಪ್ರತಿಯೊಬ್ಬ ಭಾರತೀಯರು ಈ ಸಂಸ್ಥೆಯ ಮೇಲಿಟ್ಟಿರುವ ವಿಶ್ವಾಸದ ಆಚರಣೆಯು ಆಗಿದೆ. ನೂರು ವರ್ಷಗಳಲ್ಲಿ ಪೀಳಿಗೆಗೆಗಳು ಬದಲಾಗಿವೆ, ಸರ್ಕಾರಗಳು ಬದಲಾಗಿವೆ, ತಂತ್ರಜ್ಞಾನ ಬೆಳವಣಿಗೆಯಾಗಿವೆ, ಪಠ್ಯಕ್ರಮಗಳು ಪರಿಷ್ಕರಣೆಯಾಗಿವೆ. ಆದರೆ ಯುಪಿಎಸ್‌ಸಿ ಮೇಲಿನ ನಂಬಿಕೆ ಮಾತ್ರ ಅಚಲವಾಗಿದೆ ಎಂದು ಹೇಳಿದರು.

ಸಾರ್ವಜನಿಕ ಸೇವೆಗೆ ಮತ್ತಷ್ಟು ಯುವಜನರನ್ನು ತರುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ಪ್ರಧಾನಿ ೨೧ನೇ ಶತಮಾನದಲ್ಲಿ ಭಾರತ ಹೊಸ ದುಡಿಯುವ ಸಂಸ್ಕೃತಿಯತ್ತ ಸಾಗುತ್ತಿದ್ದು, ಅದರಲ್ಲಿ ಜನಸ್ನೇಹಿ, ಸಕ್ರಿಯ ಮತ್ತು ಉತ್ತಮ ಆಡಳಿತ ಮೂಲತತ್ವಗಳಾಗಿವೆ ಎಂದರು. ಸಂಸ್ಥೆಯ ಈ ನೂರು ವರ್ಷಗಳ ಪಯಣದಲ್ಲಿ ಶ್ರಮಿಸಿದ ಎಲ್ಲರಿಗೂ ಗೌರವ ಸಲ್ಲಿಸುವುದಾಗಿ ತಿಳಿಸಿದ ಪ್ರಧಾನಮಂತ್ರಿ ಇದೇ ವೇಳೆ ಶತಮಾನೋತ್ಸವದ ಸ್ಮರಣಾರ್ಥ, ಅಂಚೆಚೀಟಿ ಹಾಗೂ ನಾಣ್ಯವನ್ನು ಬಿಡುಗಡೆ ಮಾಡಿದರು. ಮತ್ತು ಯುಪಿಎಸ್‌ಸಿಗೆ ಸಂಬಂಧಿಸಿದ ೧೦೦ ಕಾನೂನು ಬದಲಾವಣೆಗಳ ಕೈಪಿಡಿಯನ್ನೂ ಸಹ ಬಿಡುಗಡೆ ಮಾಡಿದರು. ಶತಮಾನೋತ್ಸವ ಉದ್ದೇಶಿಸಿ ಮಾತನಾಡಿದ ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಸೇವೆ ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್, ಯುಪಿಎಸ್‌ಸಿ ಹಲವು ಮಹತ್ವದ ಮೈಲಿಗಲ್ಲುಗಳನ್ನು ದಾಟಿದೆ ಮತ್ತು ಕಳೆದ ೧೨ ವರ್ಷಗಳಲ್ಲಿ ನೇಮಕಾತಿಯಲ್ಲಿ ಹೊಸ ಆಯಾಮಗಳನ್ನು ಸೇರ್ಪಡೆ ಮಾಡಿದೆ. ನೇಮಕಾತಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದಿರುವುದರಿಂದ ಸಾರ್ವಜನಿಕ ವಿಶ್ವಾಸ ವೃದ್ಧಿಸಿದೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ೬೫ ಸಾವಿರ ನೇಮಕಾತಿಗಳನ್ನು ಯುಪಿಎಸ್‌ಸಿ ಮೂಲಕ ನಡೆಸಲಾಗಿದೆ ಎಂದು ಹೇಳಿದರು.

************

ಸ್ವಚ್ಛತಾ ಹೀ ಸೇವಾ ಅಭಿಯಾನದ ಭಾಗವಾಗಿ ದೆಹಲಿಯ ಸಫ್ದಾರ್ ಜಂಗ್ ಗೋಪುರದ ಬಲಿ ಇಂದು ಬೆಳಗ್ಗೆ ನಡೆದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಭಾಗವಹಿಸಿದರು. ಈ ವೇಳೆ ಅವರು, ಸ್ವಚ್ಛತೆ ಕೇವಲ ಒಂದು ದಿನದ ಅಭಿಯಾನವಾಗಬಾರದು, ಅದು ಪ್ರತಿದಿನದ ಕರ್ತವ್ಯವಾಗಬೇಕು. ಸ್ವಚ್ಛತೆ ಪ್ರತಿಯೊಬ್ಬರ ಮನೆಯಿಂದ ಆರಂಭವಾಗಬೇಕು. ನೆರೆ-ಹೊರೆ ಮತ್ತು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಇಡೀ ರಾಷ್ಟ್ರದಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಬೇಕು ಎಂದು ಹೇಳಿದರು. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರು ಸ್ವಚ್ಛತೆಗೆ ಆದ್ಯತೆ ನೀಡಿದ್ದರು. ಅದರಂತೆ ದೇಶಾದ್ಯಂತ ಸ್ವಚ್ಛತೆಗಾಗಿ ವಿಶೇಷ ಅಭಿಯಾನಗಳನ್ನು ಕೈಗೊಳ್ಳಲಾಗುತ್ತದೆ. ಸಾರ್ವಜನಿಕರು ಸ್ವತಃ ತಾವೇ ಎಲ್ಲೆಡೆ ಸ್ವಚ್ಛತೆ ಕಾಯ್ದುಕೊಳ್ಳುವ ಸಂಕಲ್ಪ ಮಾಡಬೇಕಿದೆ ಎಂದು ಅವರು ಕರೆ ನೀಡಿದರು.

************

ಇಂದು ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ. ಈ ಸಂದರ್ಭದಲ್ಲಿ ಎಲ್ಲ ಸ್ವಯಂಪ್ರೇರಿತ ರಕ್ತದಾನಿಗಳ ಅಮೂಲ್ಯ ಕೊಡುಗೆಯನ್ನು ಸ್ಮರಿಸಿರುವ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಸಕಾಲದಲ್ಲಿ ಸುರಕ್ಷಿತ ರಕ್ತ ಪೂರೈಕೆಯನ್ನು ಖಾತರಿಪಡಿಸಿಕೊಳ್ಳಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸೋಣ ಎಂದು ಕರೆ ನೀಡಿದ್ದಾರೆ. ಅವರು ತಮ್ಮ ಸಾಮಾಜಿಕ ಜಾಲತಾಣದ ಸಂದೇಶದಲ್ಲಿ ಈ ವರ್ಷದ ಘೋಷವಾಕ್ಯ 'ಮಾನವೀಯತೆಯ ಒಂದು ಹನಿ. ರಕ್ತದಾನ ಮಾಡಿ ಜೀವ ಉಳಿಸಿ' ಎಂಬುದಾಗಿದ್ದು, ಅದರಂತೆ ಯುವಜನತೆ ಸೇರಿದಂತೆ ಎಲ್ಲ ಅರ್ಹ ನಾಗರಿಕರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಲು ಮುಂದಾಗಬೇಕು ಎಂದು ಹೇಳಿದ್ದಾರೆ. ಸಾಕಷ್ಟು ಹಾಗೂ ಸುರಕ್ಷಿತ ರಕ್ತದ ಲಭ್ಯತೆಯನ್ನು ಕಾಯ್ದುಕೊಳ್ಳಲು ಸ್ವಯಂಪ್ರೇರಿತ ರಕ್ತದಾನವನ್ನು ಪ್ರೋತ್ಸಾಹಿಸೋಣ ಮತ್ತು ನಮ್ಮ ಸಮುದಾಯಿಕ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸೋಣ ಎಂದು ಅವರು ತಿಳಿಸಿದ್ದಾರೆ.

************

ದುಬೈನಿಂದ ಇಸ್ರೇಲ್‌ಗೆ ಹೊರಟಿದ್ದ ಫ್ಲೈದುಬೈ ವಿಮಾನದ ಪತನವನ್ನು ತಡೆದು ನೂರಾರು ಮಂದಿಯ ಪ್ರಾಣ ಉಳಿಸಿದ ಭಾರತೀಯನೊರ್ವ ಪೈಲೆಟ್ ಸ್ಮಿತ್ ಮಚ್ಚರ್ ಅವರ ಕಾರ್ಯವನ್ನು ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಹಲವು ಗಣ್ಯರು ಶ್ಲಾಘಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಸಂದೇಶದಲ್ಲಿ ಸ್ಮಿತ್ ಅವರ ಬಗ್ಗೆ ರಾಷ್ಟ್ರ ಹೆಮ್ಮೆ ಪಡುತ್ತದೆ. ಅವರ ಶೌರ್ಯ ಮತ್ತು ಅಪ್ರತಿಮ ಧೈರ್ಯಕ್ಕೆ ಎಲ್ಲರೂ ತಲೆಬಾಗಬೇಕು. ತಾವು ಗಾಯಗೊಂಡಿದ್ದರೂ ಸಹ ಇತರ ಅಮೂಲ್ಯ ಜೀವವನ್ನು ಉಳಿಸಿರುವ ಸ್ಮಿತ್ ಅವರು ಶೀಘ್ರ ಗುಣಮುಖರಾಗಲಿ ಎಂದು ಆಶಿಸಿದ್ದಾರೆ. ಕ್ಯಾಪ್ಟನ್ ಸ್ಮಿತ್ ಮಚ್ಚರ್ ಒಬ್ಬ ಸಾಹಸಿ. ಅತ್ಯಂತ ಗಂಭೀರ ಅಪಾಯದ ನಡುವೆಯೂ ಮತ್ತು ತೀವ್ರವಾಗಿ ಗಾಯಗೊಂಡಿದ್ದರೂ ಸಹ ಅವರು ಇತರರ ಪ್ರಾಣ ಉಳಿಸಲು ಅಪಾರ ಧೈರ್ಯ ಮತ್ತು ದೃಢ ಸಂಕಲ್ಪ ಪ್ರದರ್ಶಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತಕ್ಕೆ ಕ್ಯಾಪ್ಟನ್ ಮಚ್ಚರ್ ಅವರ ಬಗ್ಗೆ ಹೆಮ್ಮೆಯಿದೆ. ಅವರು ಶೀಘ್ರ ಚೇತರಿಸಿಕೊಳ್ಳಲಿ ಮತ್ತು ಉತ್ತಮ ಆರೋಗ್ಯ ಹೊಂದಲಿ ಎಂದು ಪ್ರಾರ್ಥಿಸುವುದಾಗಿ ಪ್ರಧಾನಿ ತಮ್ಮ ಸಾಮಾಜಿಕ ಜಾಲತಾಣದ ಸಂದೇಶದಲ್ಲಿ ತಿಳಿಸಿದ್ದಾರೆ. ಈ ಮಧ್ಯೆ ಪ್ರಧಾನಿಯವರು ಕ್ಯಾಪ್ಟನ್ ಸ್ಮಿತ್ ಮಚ್ಚರ್ ಅವರ ಪೋಷಕರು ಹಾಗೂ ಪತ್ನಿಯೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿ ನೂರಾರು ಮಂದಿಯ ಪ್ರಾಣ ಉಳಿಸಿದ ಸ್ಮಿತ್ ಕಾರ್ಯವನ್ನು ಶ್ಲಾಘಿಸಿದ್ದಾರೆ. ಅಲ್ಲದೇ ಸ್ಮಿತ್ ಕುಟುಂಬಕ್ಕೆ ಸಾಧ್ಯವಿರುವ ಎಲ್ಲ ನೆರವನ್ನು ನೀಡುವುದಾಗಿ ಭರವಸೆ ನೀಡಿದ್ದಾರೆ. ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಸಹ ಸ್ಮಿತ್ ಮಚ್ಚರ್ ಅವರ ಧೈರ್ಯವನ್ನು ಶ್ಲಾಘಿಸಿ ಅವರಿಂದಾಗಿ ಫ್ಲೈದುಬೈ ವಿಮಾನ ಪತನ ತಪ್ಪಿದೆ. ಅಪಾಯದಲ್ಲಿದ್ದ ನೂರಾರು ಮಂದಿಯ ಜೀವ ಉಳಿಸಿದ್ದಾರೆ ಎಂದು ಹೇಳಿದ್ದಾರೆ.

************

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, 'ಸೇವಾ ಸಂಕಲ್ಪ ಅಭಿಯಾನ' ನಡೆಯುತ್ತಿದೆ. 'ಜನ ಸೇವೆಯೇ ದೇಶ ಸೇವೆ' ಎಂಬ ಮಂತ್ರದಡಿ ಸೇವೆ ಮತ್ತು ಸುಶಾಸನದ

ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ವೋಕಲ್ ಫಾರ್ ಲೋಕಲ್ ಅಂದರೆ ಸ್ಥಳೀಯ ಉತ್ಪನ್ನಗಳಿಗೆ ಧ್ವನಿಗೂಡಿಸಿ ಎಂಬುದರ ಕುರಿತ ಒಂದು ವರದಿ ಇಲ್ಲಿದೆ. ದೇಶದಲ್ಲಿ ಗ್ರಾಹಕರ ಆಯ್ಕೆಗಳು ಬದಲಾಗುತ್ತಿದೆ. ಮೊದಲು ಆಮದು ಮಾಡಿಕೊಂಡ ಮತ್ತು ಬಹುದೊಡ್ಡ ಬ್ರಾಂಡ್‌ಗಳ ವಸ್ತುಗಳನ್ನು ಬಯಸುತ್ತಿದ್ದ ಜನರು ಇದೀಗ ದೇಶೀಯ ಉತ್ಪನ್ನಗಳತ್ತ ಒಲವು ತೋರುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ದೇಶೀಯ ಉತ್ಪನ್ನಗಳಿಗೆ ಮಾರುಕಟ್ಟೆ ಬೇಡಿಕೆ ಹೆಚ್ಚಾಗಿದ್ದರಿಂದ ನಮ್ಮ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಕರಕುಶಲ ಕರ್ಮಿಗಳಿಗೆ ಹೆಚ್ಚಿನ ಕೆಲಸ ದೊರಕುತ್ತಿದೆ. ಸ್ಥಳೀಯ ಉತ್ಪನ್ನಗಳಿಗೆ ಬೆಂಬಲ ನೀಡಬೇಕೆಂಬ ಪ್ರಧಾನಿ ನರೇಂದ್ರ ಮೋದಿಯವರ ಕರೆಯ ಮೇರೆಗೆ ದೇಶದ ಬಹುಪಾಲು ಜನರು ವಿದೇಶಿ ವಸ್ತುಗಳಿಗಿಂತ ಹೆಚ್ಚಾಗಿ ದೇಶೀಯ ಉತ್ಪನ್ನಗಳ ಖರೀದಿ ಹಾಗೂ ಬಳಕೆಗೆ ಮುಂದಾಗಿದ್ದಾರೆ. ಹಾಗಾಗಿ ದೇಶೀಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿ ವ್ಯಾಪಾರ ವಹಿವಾಟು ವೃದ್ಧಿಯಾಗಿರುವುದಲ್ಲದೇ ಸ್ಥಳೀಯ ಕುಶಲ ಕರ್ಮಿಗಳಿಗೂ ಉತ್ತಮ ಆದಾಯ ದೊರಕುತ್ತಿದ್ದು, ಅವರ ಜೀವನ ಸುಧಾರಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ಕರೆಯಿಂದಾಗಿ ಸಾಕಷ್ಟು ಬದಲಾವಣೆಗಳಾಗಿದ್ದು, ಸ್ಥಳೀಯ ಉತ್ಪನ್ನಗಳಿಗೆ ಹಾಗೂ ಕರಕುಶಲ ಕರ್ಮಿಗಳಿಗೆ ಒತ್ತು ನೀಡಲು ವಿಶ್ವಕರ್ಮ ಯೋಜನೆಯನ್ನು ಆರಂಭಿಸಲಾಗಿದ್ದು, ಅದರಡಿ ೧೮ ಬಗೆಯ ಕಸುಬುಗಳಿಗೆ ಆರ್ಥಿಕ ನೆರವು ನೀಡುತ್ತಿರುವುದರಿಂದ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತಿವೆ. ಜನರು ದಿನ ಬಳಕೆಗೆ ಹೆಚ್ಚಾಗಿ ದೇಶೀಯ ವಸ್ತುಗಳನ್ನು ಬಳಕೆ ಮಾಡುತ್ತಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

************

ಜಪಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಪಟುಗಳು ಇಂದು ಸಹ ತಮ್ಮ ಪದಕದ ಬೇಟೆಯನ್ನು ಭರ್ಜರಿಯಾಗಿ ಮುಂದುವರಿಸಿದ್ದಾರೆ. ಭಾರತದ ಮನು ಫ್ರಾನ್ಸಿಸ್ ಮತ್ತು ಪ್ರಿನ್ಸ್ ಕುರಿಸಿಂತಲ್ ಜೋಡಿ ದೋಣಿ ಸ್ಪರ್ಧೆಯಲ್ಲಿ ಆರ್ಕಷಕ ಬೆಳ್ಳಿಯನ್ನು ತನ್ನದಾಗಿಸಿಕೊಂಡಿದೆ. ಅಲ್ಲದೇ ಸ್ಕ್ವಾಶ್‌ನಲ್ಲಿ ಮಹಿಳೆಯರ ತಂಡ ಸೆಮಿಫೈನಲ್‌ನಲ್ಲಿ ಹಾಂಕಾಂಗ್ ಎದುರು ೧-೨ ರಿಂದ ಪರಾಭವಗೊಂಡು ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿದೆ. ಪುರುಷರ ವೈಯಕ್ತಿಕ ಕಾಂಪೌಂಡ್ ಬಿಲ್ಲುಗಾರಿಕೆಯಲ್ಲಿ ಗಣೇಶ್ ಮಣಿರತ್ನಂ ಕಂಚಿನ ಪದಕ ಗೆದ್ದಿದ್ದಾರೆ. ಇದೇ ವೇಳೆ ಏಷ್ಯನ್ ಗೇಮ್ಸ್ ಕ್ರಿಕೆಟ್‌ನಲ್ಲಿ ಭಾರತದ ಪುರುಷರ ತಂಡ ಶ್ರೀಲಂಕಾ ವಿರುದ್ಧ ೧೨೪ ರನ್‌ಗಳಿಂದ ಗೆಲುವು ಸಾಧಿಸುವ ಮೂಲಕ ಫೈನಲ್ ಪ್ರವೇಶಿಸಿ ಪದಕ ಖಚಿತಪಡಿಸಿಕೊಂಡಿದೆ. ಪುರುಷರ ಹಾಕಿ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ಉಳಿದಂತೆ ಅಥ್ಲೆಟಿಕ್ಸ್, ಶೂಟಿಂಗ್, ಜೋಡೋ, ವಾಲಿಬಾಲ್ ಸೇರಿದಂತೆ ಹಲವು ಸ್ಪರ್ಧೆಗಳಲ್ಲಿ ಭಾರತೀಯ ಪಟುಗಳು ಸೆಣಸಲಿದ್ದಾರೆ. ಈವರೆಗೆ ಭಾರತ ಒಟ್ಟು ೧೦ ಚಿನ್ನ, ೨೨ ಬೆಳ್ಳಿ ಹಾಗೂ ೩೦ ಕಂಚಿನ ಪದಕ ಸೇರಿ ೬೨ ಪದಕಗಳೊಂದಿಗೆ ೪ನೇ ಸ್ಥಾನದಲ್ಲಿದೆ.

******END******